

ಸಸ್ಯ–ಸಗ್ಗ

# ಸಕ್ಯುಲೆಂಟ್ಸ್

## ನಗುಮೊಗದ ಸುಂದರಿಯರು

**ಎಲೆಯಿಂದ ಜೀವ ತಳೆದು ಹಬ್ಬಿ ನಗುವ ಚಂದದ ಸಸ್ಯ ಸಕ್ಯುಲೆಂಟ್‌! ಮನೆಯೊಳಗೂ ಹೊರಗೂ ಬೆಳೆಯಬಹುದಾದ ಈ ಸಸ್ಯದ ಕುರಿತಾದ ಕುತೂಹಲಕಾರಿ ಬರಹ ಇಲ್ಲಿದೆ.**

■ ಸೀಮಾ ಹೆಗಡೆ



ಫ್ಯಾಷನ್‌ನಂತೆಯೇ ದಿನ ದಿನ ಹೊಸತಾಗುವ ಮತ್ತೊಂದು ಜಗತ್ತು ಗಾರ್ಡನಿಂಗ್. ಇತ್ತೀಚೆಗೆ ಗಾಳಿ ಶುದ್ಧೀಕರಿಸುವ ಸ್ನೇಕ್ ಪ್ಲಾಂಟ್, ಪಾಮ್ಸ್, ಡ್ರೆಸಿನಾ, ಪೀಸ್ ಲಿಲ್ಲಿಯಂತಹ ವಿವಿಧ ಜಾತಿಯ ಸಸ್ಯಗಳೊಡನೆ ಒಳಾಂಗಣ ವಿನ್ಯಾಸಕ್ಕೆ ಹೊಸ ಸೇರ್ಪಡೆ ಆಗಿರುವುದು ‘ಸಕ್ಯುಲೆಂಟ್’.

ರಸಭರಿತ ದಪ್ಪ ಎಲೆಯ, ವಿವಿಧ ಆಕಾರದ, ವರ್ಷದ 365 ದಿನವೂ ಸುಂದರವಾಗಿ ಅರಳಿ ನಿಲ್ಲುವ, ವಾರಗಟ್ಟಲೇ ನೀರಿಲ್ಲದೆ ಬದುಕುವ, ಯಾವುದೇ ವಾತಾವರಣವನ್ನು ಜಯಿಸುವ, ಗಟ್ಟಿ ಜಾತಿಯ ಸಕ್ಯುಲೆಂಟ್ಸ್ ಸಸ್ಯಗಳು ಈಗ ಎಲ್ಲರಿಗೂ ಅಚ್ಚುಮೆಚ್ಚು. ಕಡಿಮೆ ನೀರಿನಲ್ಲಿ ಹಸನಾಗಿ ಬೆಳೆಯುವ ಈ ಸಕ್ಯುಲೆಂಟ್ಸ್‌ಗಳು, ಗಿಡಗಳ ಹುಚ್ಚಿರುವ ನಗರವಾಸಿಗಳಿಗೆ ಹೇಳಿ ಮಾಡಿಸಿದ ಸಸ್ಯಗಳು.

ಟೇಬಲ್ ಟಾಪ್‌ನಲ್ಲಿ ರಾರಾಜಿಸುವ; ಕಾಫಿ ಮಗ್, ಐಸ್ ಕ್ರೀಮ್ ಬೌಲ್, ಪಿಂಗಾಣಿ ಕಟೋರಿ, ಚಿಕ್ಕ ಮೊಸರು ಗಡಿಗೆಗಳಲ್ಲಿ ಮುದ್ದಾಗಿ ಮಲಗುವ ಸಕ್ಯುಲೆಂಟ್ಸ್‌ಗಳು ಗುಲಾಬಿ, ನೇರಳೆ, ನೀಲಿ, ಬೂದಿ, ಕೆಂಪು, ಚಾಕೊಲೇಟ್, ಬಂಗಾರದಂತಹ ವಿಶಿಷ್ಟ ಬಣ್ಣಗಳಲ್ಲಿ ಮನ ಸೆಳೆಯುತ್ತವೆ. ತಾವರೆಯಂತೆ ಒತ್ತಾಗಿ ಜೋಡಣೆಗೊಂಡ ದಳಗಳ ‘ಇಚಿವೇರಿಯಾ’, ಮಣಿ ಮಣಿ ಪೋಣಿಸಿದ ಮುತ್ತಿನ ಹಾರದ ‘ಸ್ಟ್ರಿಂಗ್ ಆಫ್ ಪರ್ಲ್’, ಗೊಂಚಲು ಗೊಂಚಲು ಎಲೆಯ ‘ಸೆಡಮ್’, ಕುಬ್ಜ ಮರದಂತೆ ಕಾಣುವ ‘ಜೇಡ್’, ಥೇಟ್